# ನಗರ ಬಡತನ ನಿವಾರಣೆ ಕುರಿತು ಕೆಲವು ಯಶೋಗಾಥೆಗಳು

ಕೆ.ಎಂ.ಆರ್.ಪಿ ಯೋಜನೆಯಡಿಯಲ್ಲಿ 2010-11 ಮತ್ತು 2012 ನೇ ಸಾಲಿನಲ್ಲಿ ನಗರ ಬಡತನ ನಿವಾರಣೆ ಕುರಿತು ಹಮ್ಮಿಕೊಳ್ಳಲಾದ ತರಬೇತಿಗಳಲ್ಲಿ ಸಂಗ್ರಹಿಸಿದ ಯಶೋಗಾಥೆಗಳು ತರಬೇತಿಯ ನಂತರ ತರಬೇತಿಯಲ್ಲಿ ಭಾಗವಹಿಸಿದ ಶ್ರೀಮತಿ ವಿಜಯಲಕ್ಷ್ಮಿ: ಸಮುದಾಯ ವ್ಯವಹಾರ ಅಧಿಕಾರಿ: ನಗರ ಸಭೆ, ಗದಗ-ಬೆಟಗೇರಿ, ಶ್ರೀ ಕಾಶಿನಾಥ್ ದನ್ನಿ ಹಾಗೂ ಕೆ.ಎಂ ಸುಧಾ: ಸಮುದಾಯ ಸಂಘಟಕರು: ಪುರಸಭೆ, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ ಜಿಲ್ಲೆ,ಶ್ರೀ ನಾಗೇಂದ್ರ ಸಮುದಾಯ ಸಂಘಟನಾಧಿಕಾರಿ ಮುಂತಾದವರು ತಮ್ಮ ದಿನ ನಿತ್ಯದ ಕೆಲಸ ಕಾರ್ಯದಲ್ಲಿ ಉತ್ತಮ ರೀತಿಯ ಕಾರ್ಯ ನಿರ್ವಹಿಸಿದ ಬಗ್ಗೆ. ತರಬೇತಿಯ ನಂತರ ಕೆಲವು ಯಶೋಗಾಥೆಗಳನ್ನು ದಾಖಲೀಕರಿಸಲಾಗಿದೆ.. ಅವುಗಳಲ್ಲಿ ಪ್ರಮುಖವಾಗಿ ಸ್ವಯಂ ಉದ್ಯೋಗದ ಬಗ್ಗೆ ಬ್ಯಾಂಕಿನೊಂದಿಗೆ ಉತ್ತಮ ಪ್ರತಿಕ್ರಿಯೆ, ಸಮುದಾಯದೊಂದಿಗೆ ಹೇಗೆ ವರ್ತಿಸಬೇಕು ಆ ಮೂಲಕ ಉಳಿತಾಯ ಗುಂಪಿನಿಂದ ಉದ್ಯೋಗವನ್ನು ದೊರಕಿಸಿಕೊಂಡ ಬಗ್ಗೆ, ಬ್ಯಾಂಕಿನ ಸಾಲವನ್ನು ಸದುಪಯೋಗ ಮಾಡಿಕೊಂಡಿರುವ ಬಗ್ಗೆ, ಮೂಲ ವೃತ್ತಿಯನ್ನು ಮುಂದುವರೆಸಿಕೊಂಡು ಹೋಗುವುದರ ಬಗ್ಗೆ, ಸ್ವಂತ ಉದ್ಯೋಗದ ಬಗ್ಗೆ, ಇತ್ಯಾದಿ ... ವಿಷಯಗಳ ಬಗ್ಗೆ ವಿವರಿಸಲಾಗಿದೆ.

## 01:ದೇವದಾಸಿಯ ಮಗಳ ದಿಟ್ಟ ಹೋರಾಟ.

ನಾನು ದೇವದಾಸಿಯ ಮಗಳು, ನಾನು ಎಬ್ಬೆಟ್ಟು, ನನಗೆ ಓದು-ಬರಹ ಬರದವಳು,ಒಂದು ದಿನಸಾಲ ಕೊಡ್ತಾರಂತೆ ತಗೋತ್ತಯಾ ಎಂಬ ವ್ಯಂಗ್ಯ ನುಡಿ ತಗೆದು ಬೇರೆ ಮಹಿಳೆಗೆ ಹೇಗುತ್ತಿದ್ದಳ್ಳು ಇದನ್ನು ಗಮನಿಸಿ. ಆಗ ಆಕೆ ನೀವು ಬಾಳಾ ದಿನದಿಂದ ಗಂಟು ಬಿಟ್ಟಿರಿ. ನಿಮ್ಮ ಪುರಾಣ ಏನೇದೆ ಹೇಳಿ. ನಾನು ಇವತ್ತು ಯಾವ ವ್ಯಾಪಾರನು ಮಾಡದಿಲ್ಲಾ, ಹೋಗಿ ಉಳಿದವೆಲ್ಲಾ ಹಂದಿಗೆ ಹಾಕತ್ತೇನಿ, ಎಂದು ಕುಳತೀ ಬಿಟ್ಟಳು.

ನೋಡ್ರಿ, ನಿಮ್ಮ ಪುರಾಣ ನನಗೆ ಬೇಕಿಲ್ಲಾ ನನಗೆ ನಿಮ್ಮ ಮುನ್ಸಿಪಾಲಟಿಯಿಂದ 50000/-ರೂ ಕೊಡ್ಸಿಬಿಡಿ. ನಿಮ್ಮ ಮಾತ ಕೇಳ್ತೇನೆ. ಅಂತಾ ಪಾರಂಬಿಸಿದಳು, ನಾಗಮ್ಮ. ಆಗ ಆಕೆಗೆ, ಯೋಜನೆಯ ನಿಯಮಗಳಂತೆ ಅರ್ಜಿ ತೆಗೆದುಕೊಂಡು 50000/-ರೂಗಳನ್ನು ಃಔಖ ನವರಿಂದ ಮಂಜೂರು ಮಾಡಿಸಲಾಯಿತು. ಕಾಯಿ-ಪಲ್ಯ ವ್ಯಾಪಾರ ಬಿಟ್ಟು "ಹೋಟೆಲ್" ಪ್ರಾರಂಬಿಸಿದಳು ಇದರಿಂದ ಆಕೆಯ ವಾಕ್ ಚಾತುರ್ಯದಿಂದ ಹಾಗೂ ಉತ್ತಮ ಗುಣಮಟ್ಟದ ಟಿಫಿನ್ ತಯರಿಸುತ್ತಿರುವುದರಿಂದಾಗಿ ಆಕೆಯ ಹೋಟೆಲ್‌ಗೆ ಬರುವ ಗಿರಾಕಿಗಳ ಸಂಖ್ಯೆ ಜಾಸ್ತಿಯಾಗ ತೊಡಗಿತು. ದಿನಕ್ಕೆ 200/-ರೂ ಗಳನ್ನು ಎಣಿಸುವ ನಾಗಮ್ಮ ದಿನಕ್ಕೆ 1000-1500/-ರೂಗಳ ವರಿಗೆ ವ್ಯಾಪಾರದಿಂದ, ಆಕೆಯಲ್ಲಿ ದೈಹಿಕವಾಗಿ ಆಂತರಿಕವಾಗಿ ಬದಲಾವಣೆಯಾಗತೊಡಗಿದಳು. ವೇಷ ಭೂಷಣ, ಮಾತುಗಳು, ನಡೆಯಲ್ಲಿ ಬದಲಾವಣೆಯನ್ನು ಕಾಣಲಾಯಿತು. ನಂತರ ದಿನಗಳಲ್ಲಿ ಆಕೆಯಿಂದಲ್ಲೇ ಖಊಉ ರಚನೆಯಾಯಿತು. 3ವರ್ಷಗಳ ನಂತರದಲ್ಲಿ ಆಕೆಯಿಂದ ಬಂದ ಮಾತುಗಳು

ನಾನು ಯಾರಿಗೆ ಬೇಡವಾದವಳು, ಸೂಳೆಯ ಮಗಳು, ಎನ್ನುತ್ತಾ ಹೀಯಾಳಿಸುತ್ತಾ ಇರುವವರ ಮಧ್ಯದಲ್ಲಿ ನನಗೆ ಧೈರ್ಯ, ಶಕ್ತಿ, ಸ್ಫೂರ್ತಿ ತಿಳುವಳಿಕೆ ನೀಡಿದ ಯೋಜನಾಧಿಕಾರಿಗಳು ನನಗೆ ಲಕ್ಷಗಟ್ಟಲೇ ಸಾಲ ಕೊಟ್ಟು ನನ್ನನ್ನು ಧನವಂತೆಯನ್ನಾಗಿಸಿದ–ಮ್ಯಾನೇಜರವರೇ, ನನಗೂ, ಕಾಂಟ್ರಕ್ಟರ ಮಧ್ಯ–ಕಾಮಗಾರಿಗಳ ಕೆಲಸಗಳನ್ನು ನಿರ್ವಹಿಸಲು–ಮಾರ್ಗದರ್ಶನ ನೀಡದ ಮುಖ್ಯಾಧಿಕಾರಿಗಳೇ? ಎನ್ನುವ ಸಂಭೋಧನೆಯೊಂದಿಗೆ ಪ್ರಾರಂಭಿಸಿದಳು.

ಇಂದು ಈ ನಾಗಮ್ಮ 10.00 ಲಕ್ಷಗಳ ವ್ಯವಹಾರ ಮಾಡುತ್ತಿರುವ ನಾಗಮ್ಮಳು ಮಾತ್ರ ಕಣ್ಣಿಗೆ ಕಾಣುತ್ತಿದ್ದಾಳೆ. SOMC ಕಮಿಟಿಗೆ ಅಧ್ಯಕ್ಷರಾಗಿದ್ದು ಆನಂದ–ಜ್ಯೋತಿಯ ಪ್ರತಿನಿಧಿಯಾಗಿ ನಾನು SJSRY, BCM, ST&SC ಕಾರ್ಪೋರೇಷನ್.Social Welfare Department (ಆಶ್ರಯ ಮನೆಗಳು)ನ ಮುಖಾಂತರ ಸಾಲ ಕೊಡಿಸುವಲ್ಲಿ ನಗಮ್ಮ ಕಾಣುತ್ತಾಳೆ. ವೃದ್ದಾಪ್ಯ, ವಿಧುವಾ ವೇತನ, ಅಂಗವಿಕಲ ಪಿಂಚಣಿಗೆ ಓಡಾಡುತ್ತೇನೆ. ಕೆಲವರಿಗೆ ಸಹಾಯ ಮಾಡಿದ್ದೇನೆ. ಪೋಲೀಸ್ ಸ್ಟೆಷನ್ ಎಂದು ನೋಡುವ ಮುನ್ಸಿಪಾಲಟಿಗೆ– ಮಹಿಳೆಯರನ್ನು ತವರು ಮನೆಯಂತೆ ಮಾಡಿರುವ ಈ ಯೋಜನೆ ನನ್ನ ಅನಂತ–ಅನಂತ ವಂದನೆಗಳನ್ನು ಅರ್ಪಿಸುತ್ತಿದ್ದೆನೆ.





**02 ಭಿಕ್ಷೆಯಿಂದ ಬಳಲಿದವರ ಬಾಳಲ್ಲಿ ಬದಲಾದ  ಬದುಕು.**



**ಶ್ರೀಮತಿ ಬಾಯಮ್ಮ**



**ಕಾಷಿನಾಥ ಧನ್ನಿ, ಸಮುದಾಯ ಸಂಘಟಿಕರು**

ಶ್ರೀಮತಿ ಬಾಯಮ್ಮ ಗಂಡ ವಿಶ್ವನಾಥ ಮತ್ತು ಶ್ರೀಮತಿ ತಿಪ್ಪಮ್ಮ ಗಂಡ ಲಕ್ಷ್ಮಣ ಇವರ ಜೊತೆ ಇನ್ನೂ ಎಂಟು ಮಹಿಳೆಯರು ಹೆಳವರ ಓಣಿಯ ಬಡವರಲ್ಲಿ ಬಡವರಾಗಿದ್ದವರು. ಕೌಟುಂಬಿಕ ನಿರ್ವಹಣೆಗೆ ಹರಸಾಹಸ ಪಡಿತ್ತಿದ್ದವರು. ಇವರ ಕುಲ ಕಸಬು ಹೆಳವ ಗ್ರಾಮದ ಕೌಟುಂಬಿಕ ಮೂಲ ನೆಲೆಯ ದಾಖಲೆಯ ಸಮೇತ ಇತಿಹಾಸವನ್ನು ಹೇಳುವ ಬಾಯಿ ಮಾತಿನಲ್ಲೇ ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿನವರಿಗೂ ಮಕ್ಕಳು ಮಮ್ಮೊಕ್ಕಳಾದಿಯಾಗಿ ನೂರಾರು ವರ್ಷಗಳ ಹಿಂದೆ ನಡೆದು ಬಂದ ಕಸಬು. ಇಂದು ಇದನ್ನು ಇಲ್ಲಿ ನೋಡಲಿಕ್ಕೆ ಸಾಧ್ಯಿವಲ್ಲ. ಆದರೆ ಈ ಜನಾಂಗ ಮಹಿಳೆಯರು ಮಕ್ಕಳನ್ನು  ಬಿಕ್ಷೆ ಬೇಡುವುದನ್ನು ನೀವು ಸಾಗವಾಗಿ ನೋಡಬಹುದು. ಇದಕ್ಕೆ ಮೇಲಿನ ನಮ್ಮ ಕೀರ್ತಿ ಡ್ವಾಕ್ವಾ ಮಹಿಳೆಯರೇನು ಹೊರತಾಗಿಲ್ಲ. ಎದೆಲ್ಲವನ್ನು ಕಳೆದ 4-5 ವರ್ಷಗಳಿಂದ ಈ ಗುಂಪಿನ ಮಹಿಳೆಯರು ಅನುಭವಿಸಿದ ಕಷ್ಟದ ದಿನಗಳು.

ಈ ಮಹಿಳೆಯರನ್ನ ವಾರದಲ್ಲಿ ಕನಿಷ್ಟ 2-3 ಬಾರಿ ಮನೆ-ಮನೆಗೆ ಹೋಗಿ ಮಾತನಾಡಿ ಅವರ ಮನೆಯಲ್ಲಿ ಕುಂತು ನೀರು-ಚಾ-ಕುಡಿದು ಅವರ ಬದುಕಿನ ಕಷ್ಟದ ಕ್ಷಣಗಳನ್ನು ನಾವು ಹಂಚಿಕೊಂಡಿದ್ದೇವೆ. ಹೀಗೆ ಅವರನ್ನು ಆರು ತಿಂಗಳ ಕಾಲ ಕಾಡಿ-ಬೇಡಿ ಒಂದು ಉಳಿತಾಯ ಸಂಘ ಮಾಡಿದ್ದೆವು. ಉಳಿತಾಯ ತಿಂಗಳಿಗೆ  ಕೇವಲ ರೂ. 50/- ಮಾತ್ರ ಉಳಿತಾಯದ ಹಣ ಬೆಳೆಯುತ್ತಾ ಹೋದಂತೆ ಇವರಿಗೆ ಚಾಪೆ- ಕಸಬರಿಗೆ(ಪೊರಕೆ) ಹಣವನ್ನು ಸಾಲವನ್ನಾಗಿ ಪಡೆದು ಸಣ್ಣ ವ್ಯಾಪಾರಕ್ಕೆ ಕಾಲಿಟ್ಟರು. ಇದು ಒಂದು ವರ್ಷದವರೆಗೆ ಮುಂದುವರಿಯಿತು. ಇಷ್ಟೊತ್ತಿಗಾಗಲೇ ಗುಂಪು

ಒಬ್ಬರನ್ನೊಬ್ಬರು ವಿಶ್ವಾಸದಿಂದ ವ್ಯವಹಾರ ಚುರುಕುಗೊಂಡಿತು. ಬ್ಯಾಂಕಿನವರನ್ನು ಸಂಪರ್ಕಿಸಿ ಸಾಲಕ್ಕಾಗಿ ವಿಚಾರಣೆ ಸಂಘದ ಸದಸ್ಯರಿಂದಲೇ ಆರಂಬಿಸಲಾಯಿತು. ಬ್ಯಾಂಕಿನವರು ಇದುವರೆಗೂ ನಡೆಸಿದ ಹಣಕಾಸಿನ ಒಟ್ಟು ವ್ಯವಹಾರ ರೂ 50.000/- ದಾಟಿತ್ತು. ಅಂತಿಮವಾಗಿ ಪೊರಕೆ ಉದ್ಯಮ ಆರಂಭಿಸಲು ಬ್ಯಾಂಕಿಗೆ ಅಆಖ ಮುಖಾಂತರ ಪ್ರಸ್ತಾವನೆ ಸಲ್ಲಿಸಿತ್ತು.

ಹತ್ತು ಮಂದಿ ಮಹಿಳೆಯರು ಮತ್ತು ಇವರ ಗಂಡಂದಿರು ಸೇರಿ 300 ರಿಂದ 400 ಕಿ.ಮೀ. ದೂರದ ಆಂದ್ರಪ್ರದೇಶದಲ್ಲಿ (ಸೇಂದಿ ಮರ) ಈಚಲಗಿಡದ ಗರಿಯನ್ನು ತರಲು ಹೋಗುತ್ತಾರೆ. ಒಂದು ಬಾರಿ ಹೋದರೆ 15-20 ದಿನಗಳವರೆಗೆ ಅಲ್ಲಿಯೇ ಅಡಿಗೆ ಮಾಡಿಕೊಂಡು ಅಲ್ಲಿ ಕೆಲವು ಆಳುಗಳನ್ನು ಕರೆದುಕೊಂಡು ಅವರಿಗೆ 50/- ರಿಂದ 75/- ದಿನಕ್ಕೆ ಕೂಲಿ ಕೊಟ್ಟು ಗರಿಗಳನ್ನ ಕಡಿದು ಲಾರಿಯಲ್ಲಿ ಬಸವಕಲ್ಯಾಣಕ್ಕೆ ತರುತ್ತೇವೆ. ಲಾರಿ ಬಾಡಿಗೆ 300- 3500 ಖರ್ಚು ಈ ಗರಿಗಳನ್ನು ಒಂದು ವಾರದವರೆಗೆ ಒಣಗಿಸಿ ಪೊರಕೆ ಮಾಡುತ್ತೇವೆ. ಪೊರಕೆಯನ್ನು ನಮ್ಮ ಮಕ್ಕಳು, ಗಂಡಂದಿರು, ಕುಟುಂಬದವರೆಲ್ಲರೂ ಸೇರಿ ಪೊರಕೆ ಕಟ್ಟುತ್ತೇವೆ. ಸಾಧ್ಯವಾದರೆ ಅಂದೇ ಮಾರಿಕೊಂಡು ಬರುತ್ತೇವೆ ಬಂದ ಹಣವನ್ನು ವಾರಕ್ಕೆ ತಿಂಗಳಗೆ ಕೊಡಿಟ್ಟು ಹತ್ತು ಮಹಿಳೆಯರು ಪ್ರತಿ ತಿಂಗಳು ಬಡ್ಡಿ+ಅಸಲು ಸೇರಿ 4000/- ಕಟ್ಟುತ್ತೇವೆ ನಮ್ಮ ಸಾಲ ಕೇವಲ 13,000/- ಮಾತ್ರ ಇದೆ ಈ ಬ್ಯಾಂಕಿನವರೆ ನಮಗೆ ಈ ಸಾಲ ತೀರಿದ ಮೇಲೆ 3 ರಿಂದ 4 ಲಕ್ಷ ಸಾಲ ಕೊಡುತ್ತೇವೆ ಅಂತ ಹೇಳಿದ್ದಾರೆ.

ಆರು ತಿಂಗಳ ತರುವಾಯ ಸಮುದಾಯ ಸಂಘಟಕರು ಹತ್ತಾರು ಬಾರಿ ಓಡಾಡಿ ಸಾಲ ನೀಡಲು ಬ್ಯಾಂಕಿನವರು ಒಪ್ಪಿದರುಉ ಬ್ಯಾಂಕಿನಿಂದ ರೂ 1,23,000/- ಮತ್ತು ಖಎ.ಖಖ.ಙ ಯೋಜನೆಯಿಂದ ರೂ 1,25,000/- ಸಹಾಯಧನ ಮಂಜೂರಾಯಿತು.

ನಾವೀಗ ಸ್ವತಂತ್ರವಾಗಿ ದುಡಿಯುತ್ತೇವೆ ನೆಮ್ಮದಿಯ ಜೀವನವಿದೆ ನಮಗೆ ಸ್ವಾಭಿಮಾನದ ಬದುಕನ್ನು ರೂಪಿಸಿಕೊಳ್ಳುವ ಛಲವನ್ನು ಮಹಿಳೆಯರು ನಾವು ಯಾರಿಗೇನು ಕಡಿಮೆ ಇಲ್ಲ ಅಂತ ಹೇಳುತ್ತಾರೆ. ಈ ಗುಂಪಿನ ಬೆಳವಣಿಗೆ ನೋಡಿ ಇದೇ ಓಣಿಯಲ್ಲಿ ಇನ್ನು 4 ಉಳಿತಾಯ ಗುಂಪುಗಳು ತಯರಾಗಿವೆ.

## 03: ಎರಡು ಕುರಿಗಳಿಂದ 6 ಕುರಿಗಳು, 6 ಕುರಿಗಳು ಈಗ 12 ಕುರಿಗಳು.



"ಶ್ರೀ ಮಾರಮ್ಮ ದೇವಿ" ಟಿ.ಸಿ.ಬಿ, ಆಶ್ರಯ ಬಡಾವಣೆ,ಶಿಡ್ಲಘಟ್ಟ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ. ಶಿಡ್ಲಘಟ್ಟ ಪಟ್ಟಣ ರೆಷ್ಮೇ ಕೆಲಸಕ್ಕೆ ಹೆಸರುವಾಸಿ, ಶಿಡ್ಲಘಟ್ಟ ಪಟ್ಟಣದಲ್ಲಿ ಕಾರ್ಯ ಕ್ರಮದ ಆರಂಭದಲ್ಲಿ ಫೀಲ್ಡ್ ವರ್ಕ್ ಮಾಡಲು ಹೊರಟರೆ ಎಲ್ಲೆಲ್ಲಿಯೂ ಬೆಂದ ರೇಷ್ಮೆ ಹುಳು ವಾಸನೆ ಆ ವಾಸನೆಯಿಂದ ದಾರಿಯುದ್ದಕ್ಕೂ ಬಹಳಷ್ಟು ದಿನ ವಾಂತಿ ಮಾಡಿಕೊಂಡೆ ಹೊಗುತ್ತಿದ್ದೆವು. ಆ ಮೇಲೆ ಅಭ್ಯಾಸವಾಯಿತ್ತು. ಸತ್ತ ರೆಷ್ಮೇ ಹುಳು ತಿನ್ನಲು ಬೀದಿಗಳಲ್ಲಿ ಬಹಳಷ್ಟು ನಾಯಿಗಳು, ಆಕಾಶ ನೋಡಿದರೆ ತಲೆ ಮೇಲೆನೆ ಹಾದು ಹೋದಂತೆ ಕಾಗೆಗಳು ಹದ್ದುಗಳು ಕಾಣುತ್ತಿದ್ದವು. ರಸ್ತೆಗಳೇ ಆಗಲೀ, ಚರಂಡಿಗಳೆ ಆಗಲೀ, ಸರಿಯಾಗಿ ಇರಲಿಲ್ಲ. ಆ ಊರಿನ ಜನರಿಗೆ ಈ ರೇಷ್ಮೆ ಕೆಲಸ ಬಿಟ್ಟು ಬೇರೆ ಕೆಲಸ ಮಾಡಲು ಬರುವುದಿಲ್ಲ ಬೇರೆ ಕೆಲಸ ಕಲಿತು ಕೊಂಡು ಮಾಡಿರಿ ಎಂದರೆ ಬೇರೆ ಕೆಲಸಕ್ಕೆ ಯಾರು ಬರುತ್ತಿರಲಿಲ್ಲ ಮೇಲೆ ತಿಳಿಸಿದಂತೆ ಟಿ.ಸಿ.ಜಿ. ಗುಂಪು ಮಾಡಲು ಹೋದಾಗ ಮಹಿಳೆಯರ ಗಂಡಂದಿರು ಹಾಗೂ ಪುರಸಭಾ ಸದಸ್ಯರು ಅವಾಚ್ಯಶಬ್ದಗಳಿಂದ ಹೀಯಾಳಿಸಿ ಮಾತನಾಡಿ 2-3 ಸಾರಿ ನಾವು ಅವರ ಆಸೆಯನ್ನು ಬಿಟ್ಟು ನಂತರ ಕೆಲವು ಕಾಲ ಆದ ಮೇಲೆ ಅವರೇ ಬಂದು ಸಾರಿ ಕೇಳಿ ಗುಂಪು ರಚಿಸಿ ಕೊಡಲು ಕೇಳಿಕೊಂಡರು ಅವರವರೇ ಗುಂಪು ರಚಿಸಿಕೊಂಡು ನಡೆಸಿಕೊಳ್ಳಲಾಗದೇ ಕೊನೆಯಲ್ಲಿ ನಮ್ಮ ಬಳಿ ಬಂದು ಕೇಳಿಕೊಂಡರು. ನಂತರ ನಾವು ಗುಂಪು ರಚಿಸಿ ಕೊಟ್ಟು ಜಃಒ ಶಾಖೆಯಲ್ಲಿ ಖಾತೆ ತೆರೆದು ತಿಳಿವಳಿಕೆ ನೀಡಿದೆವು.

ನಂತರ ಬ್ಯಾಂಕಿನವರಿಗೆ ಸಾಲ ನೀಡಲು ಅರ್ಜಿ ಹಾಕಿ ಸುಮಾರು 8 ತಿಂಗಳು ಒಡಾಡಬೇಕಾಯಿತು. ಏಕೆಂದರೆ ಗುಂಪು ಚಟುವಟಿಕೆ ಮಾಡಿದ್ರೆ ಮಾತ್ರ ಸಾಲ ಕೊಡ್ತೀವಿ, ಇಲ್ಲಂದ್ರೆ ಇಲ್ಲ ಎಂದು ಬಹಳ ಸತಾಯಿಸಿದ್ರು ಕೊನೆಗೆ ಕೃಷಿಮೇಳದಲ್ಲಿ ೦ಉಒ ರವರ ಬಳಿ ಮಾತನಾಡಿ ಈ ಗುಂಪಿನ ಬಗ್ಗೆ ವಿವರಿಸಿದಾಗ ತಮ್ಮ ತಮ್ಮ ಕೆಲಸಗಳಿಗೆ ಬಂಡವಾಳ ಹಾಕಿಕೊಂಡು ಜೀವನ ಆರ್ಥಿಕ

ಪರಿಸ್ಥಿತಿ ಸುಧಾರಿಸಿ ಜೀವನ ಮಟ್ಟ ಮೇಲೆ ಬರಲು ತಿಳಿವಳಿಕೆ ನೀಡಿ ತಕ್ಷಣವೇ ಮಂಜೂರಾತಿ ಆದೇಶ ನೀಡಿದರು. ಬಡ್ಡಿಹಣ, ಸುತ್ತುನಿಧಿ ಹಾಗೂ ಬ್ಯಾಂಕ್ ಸಾಲ (300000) ಸೇರಿ ಪ್ರತಿ ಸದಸ್ಯರೂ 30000-00 ರಂತೆ ಹಂಚಿಕೊಂಡು ಅವರವರ ಚಟುವಟಿಕೆಗೆ ಬಳಸಿಕೊಂಡಿರುತ್ತಾರೆ. ಕೆಲವರು ರೇಷ್ಮೆ ಕೆಲಸ, ಟೈಲರಿಂಗ್ ಚಿಲ್ಲರೆ ಅಂಗಡಿ, ಕುರಿ ಸಾಕಾಣಿಕೆ ಮಾಡುತ್ತಿರುತ್ತಾರೆ.

ಚಟುವಟಿಕೆ ಪ್ರಾರಂಭಿಸಿದ ನಂತರ ಅಷ್ಟು ಜನರ ಆರ್ಥಿಕ ಪರಿಸ್ಥಿತಿ ಬಹಳಷ್ಟು ಸುಧಾರಿಸಿದೆ. ಅದರಲ್ಲಿ ಶ್ರೀಮತಿ ಪಾರ್ವತಮ್ಮ ಅನ್ನುವವರ (ಅನಕ್ಷರಸ್ಥೆ) ಸಾಲದ ಹಣದಲ್ಲಿ ಮೊದಲು ಎರಡು, ಚಿಲ್ಲರೆ ಅಂಗಡಿ ಹಾಗೂ ತನ್ನ ಗಂಡನಿಗೆ ಟೈಲರ್ ಅಂಗಡಿ ಹಾಕಿರುತ್ತಾರೆ. ಎರಡು ಕುರಿಗಳಿಂದ 6 ಕುರಿಗಳು, 6 ಕುರಿಗಳು ಈಗ 12 ಕುರಿಗಳನ್ನು ಸಾಕುತ್ತಿರುತ್ತಾರೆ. ಮತ್ತು ಮಕ್ಕಳ ಮದುವೆಗೆ ಗುಂಪಿನಲ್ಲೇ ಸಾಲ ಪಡೆದು ಅನುಕೂಲ ಪಡೆದಿರುತ್ತಾರೆ. ಶ್ರೀಮತಿ ಪವಿತ್ರ ಎಂಬುವರು ಫ್ಯಾನ್ಸಿ ಸ್ಟೋರ್ ಕಮ್ ಟೈಲರಿಂಗ್ ಅಂಗಡಿ ಹಾಕಿಕೊಂಡಿರುತ್ತಾರೆ. ಹಾಗೂ ತನ್ನ ಮಗಳ ಮದುವೆಗೆ ಸಹ ಸಾಲ ಪಡೆದು ಆರ್ಥಿಕವಾಗಿ ಬೆಳವಣಿಗೆ ಆಗಿರುತ್ತಾರೆ.

***4:* ಮಾತಿನಂತೆ ನಂಬಿಕೆ ಉಳಿಸಿಕೊಂಡ ಬಡವರಗುಂಪು.**



**ಭಾರ್ಗವಿ ಡ್ವಾಕಾ**

ನಮ್ಮ ಕುಟುಂಬಗಳು ತೀರಾ ಬಡತನದಲ್ಲಿಯೇ ನಿರ್ವಹಣೆ. ಬಡತನದ ಪ್ರವಾಹದ ವಿರುದ್ಧ ಈಜುವುದು ನಮ್ಮ ಬದುಕಿನ ಬವಣೆ. ಗಂಡ ತಂದಿದ್ದರಲ್ಲಿ ಅಡುಗೆ ಮಾಡಿ ಮಕ್ಕಳಿಗೂ ಗಂಡನಿಗೂ ನೀಡಿ ಮಿಕ್ಕಿದ್ದು ಊಟ ಮಾಡುವ ಸಂದರ್ಭ. ಗಂಡಸರು ಮಾಡುವುದು ಬಿದಿರಿನ ಕೆಲಸದಲ್ಲಿ ಕೈಗೂಡುವುದು, ಗಂಡಂದಿರು ಕೆಲಸ ಮಾಡುವಾಗ ಕೈಗೆ ಚಾಕು ಪೆಟ್ಟು ಬಿದ್ದರೆ 8 ದಿನಗಳ ಕೆಲಸ ನಿಂತುಹೋಗುತ್ತಿತ್ತು. ಇದರಿಂದ ಸಮಸ್ಯೆ ಬಹಳವಾಗುತ್ತಿತ್ತು. ಆದಾಯವಿಲ್ಲದೇ ಜೀವನ ನಿರ್ವಹಣೆ ಮಾಡುವುದು ಬಹಳ ಕಷ್ಟವಾಗುತ್ತಿತ್ತು. ಇಂತಹ ಸಮಯದಲ್ಲಿ ಬೆಳಕಾಗಿ ಬಂದಿದ್ದು ಈ ಯೋಜನೆ.

ನಾವು ಗಂಡಂದಿರ ಕೆಲಸದಲ್ಲಿ ಭಾಗಿಯಾಗಿ ಹೆಚ್ಚಿನ ಕೆಲಸ ಮಾಡಲು ಆರ್ಥಿಕ ಸಮಸ್ಯೆ. ನಾವು ವಿದ್ಯಾವಂತರಿಲ್ಲದ್ದು ಮತ್ತೊಂದು ಸಮಸ್ಯೆ. ಮುಸುರೆ ಕೆಲಸಗಳನ್ನು ಮಾಡಲು ಮನಸ್ಸು ಒಪ್ಪದು. ಇಂತಹ ಸಂಧಿಗ್ಧ ಪರಿಸ್ಥಿತಿಯಲ್ಲಿ ಯಾರ ಮುಂದೆಯೂ ಕೈಚಾಚುವಂತಿಲ್ಲ. ಸಾಲವನ್ನು ನಾವು ಬಯಸಿದರೂ ಕೊಡುವವರು ಯಾರೂ ಇಲ್ಲ. ನಮ್ಮ ಆಸೆ ಆಕಾಂಕ್ಷೆಗಳು ಆಸೆಗಳಾಗಿ ಉಳಿಯುತ್ತಿದ್ದವು. ಬೊಂಬಿನ ಕೆಲಸ ಯಾವಾಗಲೂ ಸತತವಾಗಿರುವುದಿಲ್ಲ. ಮದುವೆ ಮಾಸ, ಜಾತ್ರೆ ಸಮಯ ಇಂತಹ ಕಾಲದಲ್ಲಿ ಮಾತ್ರ ಮಾರಾಟ. ಇದರಿಂದ ಆರ್ಥಿಕ ಸಮಸ್ಯೆ ಎದುರಿಸುತ್ತಿದ್ದೆವು.

ನಮ್ಮ ಸಹಜ ಜೀವನದಲ್ಲಿ ನಾವೆಲ್ಲ ಕೂಲಿ ಮಾಡುತ್ತಿರುವಲ್ಲಿ ನಮ್ಮನ್ನು ಹುಡುಕಿ ಬಂದಿದ್ದು ಈ ಯೋಜನೆಯ ಸಿಬ್ಬಂದಿಗಳು ಮೊದಲು ಮಲಿಯಮ್ಮ ನಿರಂತೆ ಉಳಿತಾಯ ಗುಂಪು ರಚಿಸಿ ಉಳಿತಾಯವನ್ನು ಪ್ರಾರಂಭಿಸಿದೆವು.7ತಿಂಗಳ ನಂತರ ನಮ್ಮ ಕುಲಕಸುಬು ಇದಾಗಿರುವುದರಿಂದ ನೀವು ಏಕೆ ಈ ಕೆಲಸವನ್ನು ಅಭಿವೃದ್ಧಿ ಮಾಡಬಾರದೆಂದು ನಮಗೆ ಅರಿವುಮೂಡಿಸಿ ನಾವು ಸಾಲವನ್ನು ಕೊಡುವುದಾಗಿ ತಿಳಿಸಿದರು. ಹಾಗೂ ನಿಮ್ಮ ಗಂಡಂದಿರಿಗೆ ತಾಯಿ-ತಂದೆಗಳಿಗೆ ಹೆಗಲು ಕೊಡಬಹುದು, ಸಣ್ಣ ಪ್ರಮಾಣದಲ್ಲಿದ್ದುದನ್ನು ಹೆಚ್ಚಿನ ಮಟ್ಟದಲ್ಲಿ ಪ್ರೇರೇಪಿಸಿದರು. ಮಾತಿನಂತೆ ನಡೆದುಕೊಂಡ ಸಿಬ್ಬಂದಿಯವರು ನಮಗೆ ಡ್ವಾಕ್ರಾ ಅರ್ಜಿ ಹಾಕಿಸಿ2 ತಿಂಗಳಲ್ಲಿ ನಮಗೆ ಸಿಂಡಿಕೇಟ್ ಬ್ಯಾಂಕಿನಿಂದ ರೂ.95000.00 ಸಾಲ ನೀಡಲಾಗಿ, ರೂ.50000-00 ಸಹಾಯಧನ, ರೂ.5000-00 ಮಾರ್ಜಿನ್‌ನಂತೆ ಸಾಲಸೌಲಭ್ಯ ಒದಗಿಸಲಾಯಿತು. ಕ್ರಮೇಣವಾಗಿ ನಾವು ಅಭಿವೃದ್ಧಿ ಹೊಂದುತ್ತಾ ಈಗ ನೆಮ್ಮದಿಯ ನಿಟ್ಟುಸಿರು ಬಿಟ್ಟಿದ್ದೇವೆ.

ಈ ಯೋಜನೆಯಿಂದ ನಾವು ಸಂತಸ ಕಂಡಿದ್ದಲ್ಲದೆ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಡುವುದರಲ್ಲಿ ಸಹಕಾರಿಯಾಗಿದ್ದೇವೆ. ಮನೆಯ ದುರಸ್ತಿ, ಬಿಸಿಲು-ಮಳೆಯಿಂದ ರಕ್ಷಣೆ ಮಾಡಿಕೊಂಡಿದ್ದೇನೆ. ಸಕಾಲದಲ್ಲಿ ಬೊಂಬಿನ ಸಾಮಗ್ರಿಗಳನ್ನು ಹೆಚ್ಚಿನ ಮಟ್ಟದಲ್ಲಿ ಸಂಗ್ರಹಿಸಿಕೊಂಡು ಇಟ್ಟಿರುತ್ತೇವೆ. ಬೇಡಿಕೆಗಳು ಬಂದಾಗ ನಾವು ಮದುವೆಯ ಮನೆಯ ಶೃಂಗಾರ ಬೇಸಿಗೆಯಲ್ಲಿ ಬೀಸಣಿಕೆ, ಮುಂತಾದವು ಮಾಡಿ ಮಾರಾಟ ಮಾಡುತ್ತೇವೆ. ಬಂದಂತಹ ಮೊತ್ತದಲ್ಲಿ ಖರ್ಚು-ವೆಚ್ಚ ಕಳೆದು ಬ್ಯಾಂಕಿಗೆ ಸಾಲವನ್ನು ಮರುಪಾವತಿ ಮಾಡಿ ಉಳಿದ ಮೊತ್ತದಲ್ಲಿ ನಾವೆಲ್ಲ ಹಂಚಿಕೊಂಡು ಸಂತೋಷದಿಂದಿದ್ದೇವೆ. ನಮ್ಮಂತಹ ಬಡವರಿಗೆ ಯಾರೂ ಸಹಾಯ ಮಾಡದ ಸಂದರ್ಭದಲ್ಲಿ ಯಾವ ಗ್ಯಾರಂಟಿಯಿಲ್ಲದೆ ನಮ್ಮಂತಹ ಬಡವರಿಗೆ ರೂ.10000-00 ಸಾಲ ನೀಡಿದ್ದು ಒಂದು ಗಣನೀಯವಾದುದು. ಕುರುಡನಿಗೇನು ಬೇಕು? 2 ಕಣ್ಣು ಸರ್, ಆ ಕಣ್ಣುಗಳೇ ಈ ಯೋಜನೆಯು. ಮತ್ತು ಸಿಬ್ಬಂದಿವೃಂದ ಇಂತಹ ಒಂದು ಯೋಜನೆಗೆ ಸಾಲಸೌಲಭ್ಯ ನೀಡಿದ ಬ್ಯಾಂಕ್ ಸಿಬ್ಬಂದಿಗೆ ತುಂಬು ಹೃದಯದ ಧನ್ಯವಾದಗಳು. ಈ ತರಹದ ಯೋಜನೆಗಳು ಬಹಳ ಅವಶ್ಯಕವಾಗಿವೆ. ಬಡವರಿಗೆ ಇನ್ನು ಹೆಚ್ಚಿನ ಮಟ್ಟದಲ್ಲಿ ಯೋಜನೆಗಳು ಕಾರ್ಯರೂಪಕ್ಕೆ ಬರಲಿ ಎಂದು ತುಂಬು ಹೃದಯದಿಂದ ಶ್ಲಾಘಿಸುತ್ತಿದ್ದೇನೆ.

## ೦೫ ಬೀಗರಿಪೇರಿಯವನ ಬ್ಯಾಂಕ್ ವ್ಯವಹಾರ.



ನಾನು ಸಾಬರು ನನ್ನ ವೃತ್ತಿ ಬೀಗ ರಿಪೇರಿ ನಾನು ವಾಸಿಸುತ್ತಿರುವುದು ಕೊಳಚೆ ಪ್ರದೇಶವಾದ ಚಾಮರಾಜನಗರ ಪಟ್ಟಣದ ಗಾಳಿಪುರ ಬಡಾವಣೆಯ ಬೀಡಿ ಕಾಲೋನಿಯಲ್ಲಿ ನನಗೆ ಒಬ್ಬರು ಹೆಂಡತಿ, ನಾಲ್ಕುಜನ ಮಕ್ಕಳು, ಚಿಕ್ಕವಯಸ್ಸಿನಲ್ಲೇ ಮದುವೆ ಮಾಡಿ ಸಂಸಾರದ ಜೀವನ ನಡೆಸಲು ಮನೆಯಿಂದ ಹೊರಗೆ ತಳ್ಳಿದರು. ಬೇರೆ ದಾರಿ ಕಾಣದ ನಾನು ಬೀಗ ರಿಪೇರಿ ಮಾಡುವ ಕೆಲಸದಲ್ಲೇ ಕಳೆದ ೩೦ ವರ್ಷಗಳಿಂದಲೂ ಜೀವನ ಸಾಗಿಸುತ್ತಿದ್ದೇನೆ. ಶೇ.೫ರ ಬಡ್ಡಿ ದರದಲ್ಲಿ ಸಾಲ ಮಾಡಿ ಬೀಗ ರಿಪೇರಿ ಆರಂಭಿಸಿದ ನಾನು ಪ್ರಾರಂಭದಲ್ಲಿ ಸಂಪಾದಿಸಿದ ಹಣವನ್ನೇಲ್ಲಾ, ಬಡ್ಡಿ ಸಾಲಗಾರನಿಗೆ ನೀಡಿ ಮನೆಯಲ್ಲಿ ಮಕ್ಕಳಿಗೆ ಊಟ ಮಾಡಿಸಿ ಅರೆ ಹೊಟ್ಟೆಯಲ್ಲಿ ಮಲಗುವ ಬಡ ಸಾಬಿಯಾಗಿದ್ದೆ.

ನಗರಸಭೆಯ ಶ್ರೀ ನಂಜುಂಡಯ್ಯರವರನ್ನು ಬೇಟಿಯಾದೆ, ಸಾಲ ಪಡೆಯುವ ಮಾರ್ಗವನ್ನು ನಿಯಮವನ್ನು ವಿವರಿಸಿದರು. ಇದರಿಂದ ಪ್ರೇರಿತನಾದ ಈ ಬಗ್ಗೆ ನಡೆಸಿದ ಪ್ರಯತ್ನದ ಫಲವಾಗಿ, ನಾನು ಹಿಂದೆ ಅನೇಕಬಾರಿ ನಗರಸಭೆಯವರಿಗೆ ಅಗತ್ಯವಎನಿಸ್ದಾಗಲೆಲ್ಲಾ ಕಚೇರಿಯ ಬೀಗ ರಿಪೇರಿ ಮಾಡಿ ಪರಿಚಯವಿತ್ತು. ನಾನು ನಾನು ಸ್ವಯಂ ಉದ್ಯೋಗಕ್ಕೆ ಯೋಜನೆಯಿಂದ ಅರ್ಜಿಪಡೆದುಕೊಂಡೆ. ಸಾಲ ಸೌಲಭ್ಯಕ್ಕಾಗಿ ಅಗತ್ಯವಿರುವ ಧಾದಾಖಲೆಗಳನ್ನು ಮಾಡಿಸಿ ಅರ್ಜಿ ಸಲ್ಲಿಸಿದೆ. ಈ ಬಗ್ಗೆ ನಗರಸಭೆಯು ಪಕ್ಕದಲ್ಲಿದ್ದುದರಿಂದ ಸಮಯ ಸಿಕ್ಕಾಗಲೆಲ್ಲಾ, ಬಂದು ವಿಚಾರ ಮಾಡುತ್ತಿದ್ದೇನೆ. ಅದೊಂದು ದಿನ ನೀನು ಸಾಲ ಪಡೆಯುವ ಉದ್ದೇಶದ ಬಗ್ಗೆ ಮಾಹಿತಿಯೊಂದಿಗೆ ಬ್ಯಾಂಕ್ ವ್ಯವಸ್ಥಾಪಕರುಗಳ ಮುಂದೆ ಸಂದರ್ಶನಕ್ಕೆ ಬರಬೇಕೆಂದು ತಿಳಿಸಿದರು. ಇದರಿಂದ ನಾನು ನನಗೆ ಸಾಲ ಸಿಗುವುದಿಲ್ಲ ನಾನೊಬ್ಬ ಮಸ್ಲಿಂ ಅಭ್ಯರ್ಥಿ ನನಗೆ ಬ್ಯಾಂಕಿನವರು ಆಯ್ಕೆ ಮಾಡುವುದಿಲ್ಲ ಎಂದು ತಿಳಿದು ಬೇಜಾರಿನಿಂದ ಆ ದಿನ ಸಂದರ್ಶನಕ್ಕೆ ಹೋದೆ. ಅಲ್ಲಿ ನನಗೆ ಹಲವಾರು ವಿಷಯಗಳನ್ನು ಕೇಳಿದರು. ಉತ್ತರ ನೀಡಿದೆ. ಅಲ್ಲಿದ್ದವರೆಲ್ಲರ ಕಛೇರಿಯ / ಬ್ಯಾಂಕುಗಳ ಬೀಗಗಳ ರಿಪೇರಿ ಮಾಡಿದ್ದೆ. ಇದರಿಂದ ನನಗೆ

ಲಾಭವಾಯಿತು. ನನ್ನನ್ನೂ ಸಂದರ್ಶನದಲ್ಲಿ ಆಯ್ಕೆ ಮಾಡಿದರು. ನನ್ನ ಅರ್ಜಿಯು ಎಸ್.ಬಿ.ಎಂ. ಬ್ಯಾಂಕಿಗೆ ಸಾಲದ ಮುಂಜೂರಾತಿಗಾಗಿ ಕಳಿಸಲಾಯಿತು.

ಸಂತಸವಾಯಿತು ನನಗೆ. ಆದರೆ ಮುನ್ಸಿಪಾಲಿಟಿಯವರು ಗಲ್ಲಿಯಲ್ಲಿ ಪೆಟ್ಟಿಗೆ ಇಡಲು ಆಗುವುದಿಲ್ಲವೆಂದು ತಿಳಿಸಿ ನನಗೆ ಲೈಸೆನ್ಸ್ ನೀಡಲಿಲ್ಲಾ. ಇದರಿಂದ ಧೃತಿಗೆಡದ ನಾನು ಬ್ಯಾಂಕಿಗೆ 10,000-00 ಗಳ ಡಿ.ಡಿ.ಯನ್ನು ವಾಪಸ್ಸುಕೊಟ್ಟು 15,000-00 ಗಳಲ್ಲೇ ಬೀಗ ರಿಪೇರಿ ಮಾಡುವ ವೃತ್ತಿಯನ್ನು ಆರಂಭಿಸಿದೆ. ಹೆಚ್ಚು ಬೀಗಗಳನ್ನು ತಂದು ಮೋಟಾರ್ ಸೈಕಲ್, ಕಾರು, ಜೀಪು, ಬಸ್ಸು, ಇತ್ಯಾದಿ ಬೀಗಗಳ ರಿಪೇರಿಗಳನ್ನು ಮಾಡತೊಡಗಿದೆ. ಇಲ್ಲದೇ ಹೊರಗಡೆ ಹೋಗಿ ಅನೇಕ ಕಡೆ ರಿಪೇರಿ ಕೆಲಸಗಳನ್ನು ಮಾಡಿಬರುವ ಕೆಲಸವನ್ನು ಕೈಗೊಂಡೆ ಇದರಿಂದ ಪ್ರತಿ ದಿನ 100 ರಿಂದ 120 ಸಂಪಾದನೆ ಮಾಡುತ್ತಿದ್ದ ನಾನು 200 ರಿಂದ 300 ರೂಪಾಯಿಗಳ ವರೆಗೆ ಸಂಪಾದನೆ ಮಾಡುವ ದಾರಿಯನ್ನು ಕಂಡು ಕೊಂಡೆ.

ಪ್ರತಿ ದಿನದ ಸಂಪಾದನೆಯಲ್ಲಿ 50.00 ರೂಪಾಯಿಗಳನ್ನು ಎತ್ತಿಟ್ಟಿಕೊಂಡು ಪ್ರತಿ ತಿಂಗಳು ಬ್ಯಾಂಕಿಗೆ 450-00 ರೂಪಾಯಿಗಳನ್ನು ಕಟ್ಟಿ 3 ವರ್ಷದ ಒಳಗಾಗಿಯೇ ಸಾಲವನ್ನು ಬಡ್ಡಿ ಸಮೇತ ಮರುಪಾವತಿ ಮಾಡಿದ್ದೇನೆ. ಸದ್ಯ ನನಗೆ ಬಂಡವಾಳದ ಕೊರತೆ ಇಲ್ಲ. ನನ್ನ ಜೀವನಕ್ಕೆ ಆಗುವಷ್ಟು ಸಂಪಾದನೆಯನ್ನು ಮಾಡುತ್ತಿದ್ದೇನೆ. ನನಂತವನಿಗೆ ಸಹಕಾರ ಸಿಕ್ಕಿ ಬೇರೆ ಕಸಬು ತಿಳಿಯದೆ ಒದ್ದಾಡುತ್ತಿದ್ದ, ಸಂದರ್ಭದಲ್ಲಿ ದೇವರಂತೆ ಬಂದು ಸಹಕಾರಿಯಾಗಿ ನನ್ನ ಕಷ್ಟ ನಿವಾರಣೆ ಮಾಡಿದ ಈ ಯೋಜನೆಗೆ ನನ್ನ ನಮಸ್ಕಾರಗಳು. ಹಾಗೂ ಸಹಕರಿಸಿದ ಎಲ್ಲರಿಗೂ ನಮಸ್ಕಾರಗಳು ಸ್ವಾಮಿ.

06 ಬಡತನಕ್ಕೆ ಮಣಿಯದ ಮೇದಾರ ಮಹಿಳೆಯರು.



ಸಿದ್ಧಪ್ಪಾಜಿ ಡ್ವಾಕ್ರಾ ಗುಂಪು, ಒಂದೇ ಉದ್ದಿಮೆ ಮಾಡುವ ಜನರ ಗುಂಪಾಗಿದೆ. ಇದರಿಂದಲೇ ಈ ಗುಂಪು ಬಿದಿರು ಉತ್ಪನ್ನಗಳ ತಯಾರಿಕಾ ಸಾಮಾಗ್ರಿಗಳ ಘಟಕವನ್ನು ಆರಂಭಿಸಿ ಎಸ್.ಜೆ.ಎಸ್.ಆರ್.ವೈ. ಯೋಜನೆವತಿಯಿಂದ ರೂ.40,000-00 ಗಳ ಸಹಾಯಧನ ಪಡೆದು ರೂ.80,000-00 ಗಳಿಗೆ ಘಟಕವನ್ನು ಸ್ಥಾಪಿಸಿ ಭಾರತೀಯ ಸ್ಟೇಟ್ ಬ್ಯಾಂಕ್‌ನಿಂದ ಸಾಲ ಪಡೆದು ಇಂದಿಗೂ ಸಹಾ ಉದ್ದಿಮೆಯನ್ನು ಮಾಡುತ್ತಿರುವುದು ಕಂಡು ಬಂದಿದೆ.

ಯೋಜನೆಯ ಅಧಿಕಾರಿಯವರಾದ ಯೋಜನಾಧಿಕಾರಿಯಾದ ಶ್ರೀ ವಿಜಯ ರವರನ್ನು ಭೇಟಿಯಾಗಿ ಅವರೊಂದಿಗೆ ಕಷ್ಟಕಾರ್ಪಣ್ಯಗಳನ್ನು ಹೇಳಿಕೊಂಡೆವು ನಾವು ಈಹೊತ್ತಿಗೆ ನಿರಂತರ ಉಳಿತಾಯ ಗುಂಪುಗಳನ್ನು ಮಾಡಿಕೊಂಡಿದ್ದರಿಂದ ನಮಗೆ ಡ್ವಾಕ್ರಾ ಗುಂಪಿನ್ನು ರಚಸಿಕೊಳ್ಳಲು ಸುಲಭವಾಯಿತು. ಅದರಂತೆ ನಾವು 10 ಜನ ಸದಸ್ಯರು ಸೇರಿ ಬಿದಿರು ಉತ್ಪನ್ನಗಳ ತಯಾರಿಕೆಯ ಘಟಕವನ್ನು ಆರಂಭಿಸಲು ಮಾತನಾಡಿಕೊಂಡು ಅದಕ್ಕೆ ಬೇಕಾದ ಅಗತ್ಯ ದಾಖಲಾತಿಗಳನ್ನು ಮತ್ತು ಯೋಜನಾವರಧಿಯನ್ನು ಸಂಬಂದಪಟ್ಟ ಅಧಿಕಾರಿಗಳಂದ ಮಾಡಿಸಿಕೊಂಡು ಯೋಜನಾಧಿಕಾರಿ ಶ್ರೀ ವಿಜಯ ರವರ ನೆರವಿನೊಂದಿಗೆ ಅರ್ಜಿ ಸಲ್ಲಿಸಿದೆವು. ಇದನ್ನು ಪರಿಗಣಿಸಿದ ನಗರಸಭೆಯ ಪೌರಾಯುಕ್ತರು ಹಾಗೂ ಬ್ಯಾಂಕ್ ಅಧಿಕಾರಿಗಳು ಭಾರತೀಯ ಸ್ಟೇಟ್ ಬ್ಯಾಂಕಿನಲ್ಲಿ ಉಳಿತಾಯ ಖಾತೆ ಇರುವುದರಿಂದ ಅಲ್ಲಿಗೆ ನಮ್ಮ ಸಾಲದ ಅರ್ಜಿಯನ್ನು ಕಳುಹಿಸಲಾಗಿತ್ತು. ಆ ಬ್ಯಾಂಕಿನ ವ್ಯವಸ್ಥಾಪಕರು ನಮಗೆ ತಿಳಿದು ಪರಿಚಿತರಾದುದ್ದರಿಂದ ಒಂದು ತಿಂಗಳೊಳಗಾಗಿಯೇ ಸಾಲ ಮಂಜೂರಾತಿ ನೀಡಿದರು. ಇದರಿಂದ ಸಂತೋಷಗೊಂಡ ನಾವು ಸಹಾಯಧನವನ್ನು ಒಂದೆರಡು ದಿನದಲ್ಲಿ ಪಡೆದುಕೊಂಡು ಸಫಲತೆಯನ್ನು ಕಂಡೆವು.

ನಂತರ ನಾವು ಪ್ರತಿ ದಿನ ಇದೇ ಕಸುಬನ್ನು ಮಾಡುತ್ತಿದ್ದರಿಂದ ನಮಗೆ ಈ ಉದ್ದಿಮೆ ಆರಂಭಿಸಲು ಯಾವುದೇ ತೊಂದರೆಗಳು ಆಗಲಿಲ್ಲ. ಬೇರೆ ವೃತ್ತಿ ತಿಳಿಯದ ನಮಗೆ ಇದೇ ದೇವರು ಕೊಟ್ಟ ಕಸುಬೆಂದು ತಿಳಿದು, ಪ್ರಾರಂಭ ಮಾಡಿದೆವು. ಪ್ರಾರಂಭದ ನಂತರ ದಿನ ಒಂದಕ್ಕೆ ರೂ.50 ಗಳಿಸುತ್ತಿದ್ದಾ, ನಾವು ರೂ.100 ಗಳಿಸುವ ಮಟ್ಟಕ್ಕೆ ತಕ್ಷಣವೇ ಬೆಳೆದೆವು. ಬಂಡವಾಳದ ಕೊರತೆಯಿಂದ ಶೇ.10ರ ಬಡ್ಡಿ ದರದಲ್ಲಿ ಸಾಲ ಮಾಡಿ ಬಿದಿರು ತಂದು ಬುಟ್ಟಿ ತಯಾರಿಸಿ ಮಾರಾಟ ಮಾಡಿ ಬಡ್ಡಿಯವರಿಗೆ ಹಣ ನೀಡುತ್ತಿದ್ದ ಕಷ್ಟದಿಂದ ಹೊರಗೆ ಬಂದು ನಮ್ಮ ದುಡ್ಡಿನಲ್ಲೇ ಬಿದಿರು ತಂದು ಬುಟ್ಟಿಗಳು, ತಟ್ಟೆಗಳು, ಏಣಿಗಳು, ಬೀಸಣಿಗೆಗಳು ಹಾಗೂ ಇತರೆ ಪದಾರ್ಥಗಳನ್ನು ತಯಾರಿಸಿ ನೇರವಾಗಿ ಸಂತೇಮರಳ್ಳಿ ಸಂತೆಯಲ್ಲಿ ವ್ಯಾಪಾರ ಮಾಡುವ ಕಾಯಕವನ್ನು ಕಂಡುಕೊಂಡೆವು. ಇದರಿಂದ ನಮ್ಮ ದುಡಿಮೆಗೆ ತಕ್ಕಂತೆ ಪ್ರತಿಫಲ ದೊರಕಿ ಲಾಭದ ಅಂಶವು ಹೆಚ್ಚು ಸಿಕುವಂತಾಯಿತು. ನಾವುಗಳಲ್ಲದೆ ನಮ್ಮ ಗಂಡಂದಿರು ಸಹಾ ಇದೇ ವೃತ್ತಿಯಲ್ಲಿ ಭಾಗಿಯಾಗಿ ದುಡಿಯುವಂತಾಯಿತು. ಇದರಿಂದ ನಮ್ಮ ಮನೆಯವರಿಗೂ ಸಂತಸವಾಗಿ ವೃತ್ತಿಯಲ್ಲಿ ಲಾಭದ ಅಂಶ ಕಂಡು ದುಡಿಮೆಯು ಹೆಚ್ಚಾಯಿತು. ನಮ್ಮ ವೃತ್ತಿಯನ್ನು ಕಂಡ ಕೆಲವರು ವ್ಯಾಪಾರದಲ್ಲಿ ಪೈಪೋಟಿ ಮಾಡಿದರೂ ಸಹಾ ಬಗ್ಗದೆ ಧೈರ್ಯದಿಂದ ವೃತ್ತಿಯನ್ನು ಆರಂಭಿಸಿ ಸಂಸಾರ ಜೀವನವನ್ನು ನಡೆಸಲು ಸುಗಮದಾರಿ ಸಿಕ್ಕಿದಂತಾಯಿತು. ಇದರಿಂದ ಮಕ್ಕಳ ವಿದ್ಯಾಭಾಸ ಸಾಲ ಮರುಪಾವತಿ ಹಬ್ಬ ಹರಿದಿನಗಳು, ಆಚರಿಸಲು ನಮಗೆ ಹಣ ಸಿಕ್ಕಿದಂತಾಯಿತು. ಇದರೊಂದಿಗೆ ಉಳಿತಾಯ ಮಾಡುವ ಪ್ರವೃತ್ತಿಯನ್ನು ಬೆಳೆಸಿಕೊಂಡು ಒಂದಷ್ಟು ಕಾಸನ್ನು ಉಳಿತಾಯ ಮಾಡಿರುತ್ತೇವೆ.

ಮುಂದೆ ಅಕ್ಕಪಕ್ಕದಲ್ಲಿರುವ ಚಾಮರಾಜನಗರ, ಸಂತೆಮರಳ್ಳಿ, ಕುದೇರು ಹಾಗೂ ಮುಡಿಗುಂಡದ ಸರ್ಕಾರಿ ಫಿಲೇಚರ್‌ಗಳಿಗೆ ರೇಷ್ಮೆನೂಲು ಬಿಚ್ಚುವ ತಟ್ಟೆಗಳನ್ನು ಮಾಡಿಕೊಡಲು ಟೆಂಡರ್‌ನಲ್ಲಿ ಭಾಗವಹಿಸಿ ಟೆಂಡರ್ ಪಡೆದು ಪ್ರತಿ ವರ್ಷ 1000 ದಿಂದ 2000 ದವರೆಗೆ ತಟ್ಟೆಗಳನ್ನು ಮಾಡಿಕೊಡುತ್ತಿದ್ದೇವೆ. ಒಂದು ತಟ್ಟೆಯ ಬೆಲೆ ಟೆಂಡರ್‌ನಲ್ಲಿ ರೂ.35-00 ಗಳಿಗೆ ಸಿಕ್ಕಿದ್ದು, ಇದರಿಂದ ಒಟ್ಟಾಗಿ ಹಣ ಒಂದೇ ಸಾರಿ ಸಿಗುವಂತಾಯಿತು. ಈ ವೃತ್ತಿಯನ್ನು ಬಿಡದೆ ಇಂದಿಗೂ ಮಾಡುತ್ತಾ, ಪ್ರತಿ ವರ್ಷ ಟೆಂಡರ್‌ನಲ್ಲಿ ನಾವೇ ಭಾಗವಹಿಸಿ ಟೆಂಡರ್ ಪಡೆಯುತ್ತಿದ್ದೇವೆ. ಇದಲ್ಲದೆ ಮೈಸೂರು ಮತ್ತು ಬೆಂಗಳೂರಿನಲ್ಲಿ ಮಾರಾಟ ಮಾಡುವವರೆಗೂ ಹೋಲ್‌ಸೇಲ್ ದರಲ್ಲಿ ಸಾಮಾಗ್ರಿಗಳನ್ನು ಮಾರಾಟ ಮಾಡುತ್ತಿದ್ದು, ಇದರಿಂದಲೂ ಸಹಾ ಒಂದೇ ಸಾರಿ ಗಂಟಾಗಿ ಹಣ ಬರುವ ದಾರಿಯನ್ನು ಕಂಡು ಕೊಂಡಿದ್ದೇವೆ. ಕಾಲಕ್ಕೆ ತಕ್ಕಂತೆ ಒಂದೊಂದು ಪದಾರ್ಥಗಳಿಗೆ ಬೆಲೆ ಇದ್ದು, ಅದರಂತೆ ನಾವು ಆಯಾಯಾ ಪದಾರ್ಥಗಳನ್ನು ತಯಾರಿಸುತ್ತಿದ್ದೇವೆ. ಉದಾಹರಣೆಗೆ ಮದುವೆ ಹಾಗೂ ಗೌರಿ ಹಬ್ಬದ ತಿಂಗಳಿನಲ್ಲಿ ಮೊರಕ್ಕೆ ಬೇಡಿಕೆ ಹೆಚ್ಚು. ಲಾಭವು ಹೆಚ್ಚು. ಆಗಿಯೇ ಮಳೆಗಾಲದಲ್ಲಿ ರೇಷ್ಮೆ ಹುಳು ತಟ್ಟೆ ಬೇಸಿಗೆ ಕಾಲದಲ್ಲಿ ಬೀಸಣಿಗೆಗೆ ಅತಿ ಬೇಡಿಕೆ. ಈ ಬೇಡಿಕೆಗಳನ್ನು ಮನಗಂಡ ನಾವು ಆಯಾಯಾ ಕಾಲದಲ್ಲಿ ಆಯಾಯಾ ವಸ್ತುಗಳನ್ನೇ ಹೆಚ್ಚು ತಯಾರು ಮಾಡಿ ಹಣ ಸಂಪಾದಿಸುತ್ತಿದ್ದೇವೆ. ಒಂದು

ವಾರಕ್ಕೆ ಗಂಡಹೆಂಡಿರು 600 ರಿಂದ 700 ರೂಪಾಯಿಗಳವರೆಗೆ ಸಂಪಾದನೆ ಮಾಡುತ್ತಿದ್ದು, ಇದರಲ್ಲಿ 400 ರೂ.ಗಳು ಮನೆ ಖರ್ಚಿಗಾಗಿ ಬಳಸುತ್ತಿದ್ದು, ಉಳಿದ 200 ರೂ.ಗಳಲ್ಲಿ ಉಳಿತಾಯ ಮತ್ತು ಸಾಲ ಮರುಪಾವತಿಗೆ ನೀಡುವುದರೊಂದಿಗೆ ಮನೆಯಲ್ಲಿ ರೂ.50 ಗಳನ್ನು ಉಳಿತಾಯ ಮಾಡುವ ಪರಿಪಾಠವನ್ನು ಮಾಡುತ್ತಿದ್ದೇವೆ. ಅತಿ ಕೊಳಚೆ ಪ್ರದೇಶದಲ್ಲಿ ವಾಸ ಮಾಡಿ ಕಷ್ಟಕರ ಜೀವನ ನಡೆಸುತ್ತಿದ್ದ ನಮಗೆ ಒಂದು ದಾರಿ ಗೋಚರವಾಗಿ ಅದರಲ್ಲಿ ಸಾಗಿದ ನಾವು ಬೆಳಕು ಕಂಡು ಮಕ್ಕಳಿಗೆ ಒಳ್ಳೇಯ ಊಟ ಬಟ್ಟೆ ಮತ್ತು ಶಾಲೆಗೆ ಸೇರಿಸುವ ದಾರಿ ಕಂಡು ಕೊಂಡು ಒಳ್ಳೇಯ ಬದುಕನ್ನು ನಡೆಸಲು ದಾರಿ ಮಾಡಿಕೊಟ್ಟು ಸಹಕರಿಸಿದ ಎಲ್ಲರಿಗೂ ನಮ್ಮ ಅನಂತ ಅನಂತ ಕೃತಜ್ಞತೆಗಳು.

**07 ಬಡ ಕುಟುಂಬದ ಕೈಗೊಂದುಕೆಲಸ ನಿಟ್ಟುಸುರಿಗೆ ಬಲ ಕೊಟ್ಟ ಯೋಜನೆ.**



ನಾನು ಭಾಗ್ಯ ವಾರ್ಡ್ ನಂ. 35 ರ ಭಂಡಾರಹಳ್ಳಿಯಲ್ಲಿ ವಾಸಮಾಡುತ್ತಿದ್ದೇನೆ. ಈ ಪ್ರದೇಶವು ನಗರಸಭೆಗೆ ಸೇರಿದರು ಗ್ರಾಮೀಣ ಪ್ರದೇಶದ ಲಕ್ಷಣಗಳನ್ನು ಹೊಂದಿದೆ. ನಾನು ಮದುವೆಯಾಗಿ 13 ವರ್ಷವಾಗಿದ್ದು 2 ಹೆಣ್ಣು 1 ಗಂಡು ಮಗುವಿದೆ. ನನ್ನ ಗಂಡ ಪಕ್ಕದಲ್ಲೇ ಇರುವ ಕೈಗಾರಿಕೆಯಲ್ಲಿ 1500/-ರೂಗಳ ಸಂಬಳಕ್ಕೆ ಕೆಲಸ ಮಾಡುತ್ತಿದ್ದಾರೆ. ಇದರ ಜೊತೆಗೆ ನನ್ನ ಅತ್ತ ಮಾವ ಮದುವೆಯಾಗದ ನನ್ನ ನಾದಿನಿ ಇದ್ದಾರೆ. ಪ್ರತಿ ದಿನ ನನ್ನ ಗಂಡ ತರುವ ಸಂಬಳ ಸಾಕಾಗದೆ ಎಷ್ಟೋ ದಿನ ನೀರು ಕುಡಿದು ಹೊಟ್ಟೆ ತುಂಬಿಸಿದೊಂಡಿದ್ದೇನೆ. ನನಗೆ ಗೊತ್ತಿದ್ದ ಕಸುಬು ಎಂದರೆ ಹಸು ಸಾಕಾಣಿಕ ಮಾತ್ರ. ಹಸು ತೆಗೆದುಕೊಳ್ಳಲು ಹಣದ ಕೊರತೆ ಕಾಡುತ್ತಿತ್ತು. ಈ ಬಗ್ಗೆ ನಗರ ಸಭೆಯಿಂದ ಎಸ್.ಜೆ.ಎಸ್.ಆರ್.ವೈ ಯೋಜನೆಯಡಿಯಲ್ಲಿ ಸಾಲವನ್ನು ಪಡೆಯಲು ಅರ್ಜಿ ಹಾಕಿ ಇದರ ಬಗ್ಗೆ ಈಶ್ವರಪ್ಪ ಎಂಬ ಅಧಿಕಾರಿ ನನ್ನ ಜೊತೆ ಅನೇಕ ಸಲ ಬ್ಯಾಂಕಿಗೆ ಬಮದು ಹೇಳಿದರು ಸಹ ನಿಮ್ಮ ಏರಿಯದ ಜನ ಸಾಲ ತೆಗೆದುಕೊಂಡು ಸಾಲ ಕಟ್ಟಿರುವುದಿಲ್ಲ. ಅದಕ್ಕೆ ಸಾಲ ಕೊಡುವುದಿಲ್ಲ ಎಂದು

ಹೇಳಿದರು ಬಹಳಾ ನಿರಾಸೆಹಾಯಿತು ಕೊನೆಗೆ ನಮ್ಮ ಸಂಘದ ಸದಸ್ಯರ ಜೊತೆ ಮಾತನ್ನಾಡಿ ನನಗೆ ೩೦೦೦೦/-ಸಾಲ ಕೊಡಿಸಿ ಎಂದು ಕೇಳಿದೆ ಅದಕ್ಕೆ ಅವರು ಭದ್ರಾ ನಿರಂತರ ಉಳಿತಾಯ ಗುಂಪುಗಳ ಒಕ್ಕೂಟದಿಂದ ಯಾವುದೇ ಜಾಮೀನು ಇಲ್ಲದೆ ನನಗೆ ೩೦೦೦೦/-ಸಾಲ ನೀಡಿದರು

ನಾನು ೩೦೦೦೦/-ಸಾಲದಲ್ಲಿ ೨೩೫೦೦/-ಗೆ ಒಂದು ಜೆರ್ಸಿ ಹಸು ತೆಗೆದುಕೊಂಡೆ ಬಾಕಿ ಉಳಿದ ೬೫೦೦/-ರೂಗಳಲಿ ಕೋಳಿಗೆ ಕಟ್ಟಿಕೊಂಡೆ ಅದರಂತೆ ಪ್ರತಿದಿನ ಬೇಳ್ಳಗ್ಗೆ ಸಂಜೆ ಸೇರಿ ೨೫ಲೀ ಹಾಲನ್ನು ಡೈರಿಗೆ ಹಾಕಿದೆ, ಪ್ರತಿ ದಿನ ೩೭೫/-ರೂನಂತೆ ತಿಂಗಳಿಗೆ ೧೧೨೫೦/-ರೂನಂತೆ ಪಡೆದೆ. ಇದರಲ್ಲಿ ಅಸಲು & ಬಡ್ಡಿಯನ್ನು ಮರುಪಾವತಿಯನ್ನು ಹತ್ತು ತಿಂಗಳಲ್ಲೇ ಮುಗಿಸಿದ್ದೇನೆ ಬಾಕಿ ಉಳಿದ ಹಣದಲ್ಲಿ ನನ್ನ ಮಕ್ಕಳನ್ನು ಚೆನ್ನಾಗಿ ಬೆಳೆಸುವ ಉದ್ದೇಶದಿಂದ ಪ್ರತಿ ತಿಂಗಳು ೩ ಮಕ್ಕಳಿಗೂ ೫೦/-ರೂನಂತೆ ಎಲ್.ಐ.ಸಿ ಮಾಡಿಸಿದ್ದೇನೆ ಹಾಗೂ ನನ್ನ ನಾದಿನಿ ಮದುವೆಗಾಗಿ ತಿಂಗಳಿಗೆ ೩೫೦/- ಪೋಸ್ಟ್ ಆಫೀಸ್‌ನಲ್ಲಿ ಆರ್.ಡಿ ಕಟ್ಟುತ್ತಿದ್ದೇನೆ.

ನಾನು ಈ ಕಾರ್ಯಕ್ರಮದಲ್ಲಿ ತೊಡಗಿಸಿಕೊಂಡ ನಂತರ ನನ್ನ ಕುಟುಂಬದಲ್ಲಿ ಪ್ರತಿ ದಿನ ಸಣ್ಣ ಸಣ್ಣ ವಿಚಾರಕ್ಕೂ ಜಗಳವಾಗುತ್ತಿತ್ತು. ಆದರೆ ನಾನು ದುಡಿಮೆ ಮಾಡುತ್ತಿರುವುದರಿಂದ ನನ್ನ ಅತ್ತೆ ಮಾವ ನನ್ನನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದಾರೆ ಈಗ ಪ್ರತಿ ಹಬ್ಬವನ್ನು ಅದ್ದೂರಿಯಾಗಿ ಆಚರಿಸುವಷ್ಟು ನನ್ನ ಕುಟುಂಬ ಬದಲಾಗಿದೆ. ನಾನು ೨೦ಗ್ರಾಂ ಚಿನ್ನದಲ್ಲಿ ಮಾಂಗಲ್ಯ ಸರ ಮಾಡಿಸಿಕೊಂಡಿದ್ದೇನೆ. ಇದಕ್ಕೆ ಎಲ್ಲವು  ನಿರಂತರ ಉಳಿತಾಯ ಗುಂಪುಗಳ ಒಕ್ಕೂಟಕ್ಕೆ ಸೇರತಕ್ಕದ್ದು ಈ ಒಕ್ಕೋಟಕ್ಕೆ ಇನ್ನೂ ಹೆಚ್ಚಿನ ಜನಕ್ಕೆ ಸಾಲ ನೀಡಲು ಶಕ್ತಿ ನೀಡಬೇಕೆಂದು ದೇವರಲ್ಲಿ ಕೋರುತ್ತೇನೆ.

**<u>೦೮ ಡಿಜಿಟಲ್ ಪೋಟೋ ಸ್ಟೋಡಿಯೊ.</u>**

ಮೀನಾಕ್ಷಿ ಕೋಂ ಶಿವಯೋಗಿಶ್ವರ ಸ್ವಾಮಿ ನಾನು ದಾವಣಗೆರೆಯಲ್ಲಿ ಸುಮಾರು 30 ವರ್ಷಗಳಿಂದ ವಾಸಿಯಾಗಿದ್ದು, ಮೀನಾಕ್ಷಿ ಎಸ್.ಎಸ್.ರವರು ಬಿ.ಪಿ.ಎಲ್.ಕುಟುಂಬದ ಸದಸ್ಯರು ಆಗಿದ್ದು ಈ ಒಂದು ಕಾರ್ಯಕ್ರಮದಲ್ಲಿ ಮಹಿಳಾ ನೆರೆಹೊರೆ ಸಮಿತಿಯಲ್ಲಿ ಸಂಚಾಲಕಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಎಸ್.ಜೆ.ಎಸ್.ಆರ್.ವೈ ಯೋಜನೆ ವತಿಯಿಂದ ರಚನೆ ಮಾಡಲಾದ ಮಹಿಳಾ ಸ್ವ-ಸಹಾಯ ಗುಂಪುಗಳಲ್ಲೂ ಇವರು ಶ್ರೀರೇಣುಕಾ ಯಲ್ಲಮ್ಮ ಎಂಬ ಮಹಿಳಾ ನಿತಂತರ ಉಳಿತಾಯ ಗುಂಪು ರಚನೆ ಮಾಡಿಕೊಂಡು ಬರುತ್ತಿದ್ದಾರೆ ಸಂಘದಲ್ಲಿ 15 ಜನ ಮಹಿಳಾ ಸದಸ್ಯರುಗಳನ್ನು ಹೊಂದಿರುತ್ತಾರೆ. ಸಂಘದಲ್ಲಿ ಸಮಾನತೆಯಿಂದ ಸಂಘವನ್ನು ಮುನ್ನೆಡೆಸಿಕೊಂಡು ಬರುತ್ತಿದ್ದಾರೆ, ಸಂಘದಲ್ಲಿರುವ ಉಳಿತಾಯ ಹಣದಲ್ಲಿ ಸಾಲ ವಿತರಣೆಯನ್ನು ಮಾಡಿ ಕಂತುಗಳ ಮೂಲಕ ಮರುಪಾವತಿಯನ್ನು ಸೇವಾ ಶುಲ್ಕದೂಂದಿಗೆ ಪಡೆಯುತ್ತಿದ್ದಾರೆ, ಪತ್ರಿ ಸದಸ್ಯರಿಗೆ ರೂ.6000/-ಗಳನ್ನು ನೀಡುತ್ತಿರುವುದು ಹಾಗೂ ಸಂಘದಲ್ಲಿ ಅಧ್ಯತೆಯ ಮೇರೆಗೆ ಸಾಲದ ಅರ್ಜಿಯನ್ನು ಪಡೆದುಕೊಂಡು

ಸಭೆಯಲ್ಲಿ ತಿರ್ಮಾನದ ಮೂಲಕ ಸಾಲ ವಿತರಣೆಯನ್ನು ಮಾಡುತ್ತಿರುವುದು ತಿಳಿದುಬಂದಿತು, ಯೋಜನಾ ಇಲಾಖೆ ವತಿಯಿಂದ ಹೆಚ್ಚಿನ ಮಾಹಿತಿಯನ್ನು ಕಮ್ಯುನಿಟಿ ಅಫೇರ್ಸ್ ಅಧಿಕಾರಿ ಮತ್ತು ಸಮುದಾಯ ಸಂಘಟಕರಿಂದ ಪಡೆದು ಕೊಳ್ಳೆತ್ತೇನೆ ಎಂದು ತಿಳಿಸಿರುತ್ತಾರೆ.

ನಂತರ ಎಸ್.ಜೆ.ಎಸ್.ಆರ್.ವೈ ಯೋಜನೆಯಡಿ ಆಯ್ಕೆಮಾಡಿಕೊಂಡು ರೂ.50,000/-ಗಳ ಸಾಲ ಮಂಜೂರಾತಿಯನ್ನು ಮಾಡಿರುತ್ತಾರೆ. ಮಂಜೂರಾದ ಸಾಲದ ಹಣದಲ್ಲಿ ಡಿಜಿಟಲ್ ಪೋಟೋ ಸ್ಟೋಡಿಯೋವನ್ನು ಸ್ಥಾಪಿಸಿಕೊಂಡು ಇದರ ಮೂಲಕ ತಮ್ಮ ವ್ಯವಹಾರ ಹೊಂದಿದ್ದು ಆದಾಯವನ್ನು ಪಡೆಯುತ್ತಿದ್ದಾರೆ. ಹಾಗೆ ಸರ್ಪೂಣವಾಗಿ ಈ ಉದ್ಯೋಗದಲ್ಲಿ ತಮ್ಮನ್ನು ತಾವು ತೊಡಿಗಿಸಿಕೊಂಡು ತಮ್ಮ ಪತಿಯ ಸಹಾಕಾರದೊಂದಿಗೆ ಯಶಸ್ವಿ ಉದ್ಯೋಗಿಗಳಾಗಿದ್ದಾರೆ,ಈಗ ಸದರಿ ಉದ್ಯೋಗದ ಆದಾಯ ತಿಂಗಳಿಗೆ ರೂ.4000/ರಿಮದ 5000/-ರವರಗೆ ಇದ್ದು, ಕುಟುಂಬದ ನಿರ್ವಹಣೆಯನ್ನು ಕೊಡ ಹಾಗೂ ಮಕ್ಕಳ ವಿದ್ಯಾಭ್ಯಾಸ ಇತರೆ ಎಲ್ಲಾವನ್ನು ನಿಭಾಯಿಸಿಕೊಂಡು ಉತ್ತಮ ಉದ್ಯೋಗಿಯಾಗಿರುತ್ತಾರೆ, ಸುರಭಿ ಸ್ತ್ರೀಶಕ್ತಿ ಸ್ವ-ಸಹಾಯ ಸಂಘದ ಸದಸ್ಯರೊಂದಿಗೆ ಸಂವಾದ ಕಾರ್ಯಕ್ರಮ, ಒಬ್ಬರೇ ಬ್ಯಾಂಕ್ ವ್ಯವಹಾರ ಮಾಡುವ ಧೈರ್ಯ ಬಂದಿದೆ,